**ದಿನಾಂಕಃ 19.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಜಿ ವಕೀಲರಿಂದಃ**

ನ್ಯಾಯಾಲಯಕ್ಕೆ ನಾನು ವಾದಿಯ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ವಾದಿಯು ಶಿವಕುಮಾರ್ ಎನ್ ರವರ ಮಗ ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾತ್ರ ಮೃತ ಶಿವಕುಮಾರ್ ಎನ್ ರವರ ಹೆಂಡತಿ ಎಂದರೆ ಸಾಕ್ಷಿದಾರರು ವಾದಿಯ ತಾಯಿ ಕೂಡಾ ಶಿವಕುಮಾರ್ ಎನ್ ರವರ ಹೆಂಡತಿ ಇದ್ದಾರೆ ಎನ್ನುತ್ತಾರೆ. ವಾದಿಯ ತಾಯಿ ಶಿವಕುಮಾರ್ ಎನ್ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯನ್ನು ಆತ ಚಿಕ್ಕಮಗು ಇದ್ದಾಗಿನಿಂದ ಸಾಕಿ ಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ಶಿವಕುಮಾರ್ ಎನ್ ರವರು 2 ನೇ ಪ್ರತಿವಾದಿಗೆ ದತ್ತಕ ತೆಗೆದುಕೊಂಡು ಭೂಮಿ ಪಬ್ಲಿಕ್ ಶಾಲೆಯಲ್ಲಿ, ಸಿದ್ದಶ್ರೀ ಶಾಲಿಯಲ್ಲಿ ಮತ್ತು ವಿನಾಯಕ ಶಾಲೆಯಲ್ಲಿ ಓದಿಸಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರನ್ನು ಹೊರತುಪಡಿಸಿ ಮೃತ ಶಿವಕುಮಾರನ ಆಸ್ತಿಗೆ ಯಾರು ವಾರಸುದಾರರು ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ವಾದಿ ಮತ್ತು ಆತನ ತಾಯಿ ಕೂಡಾ ಶಿವಕುಮಾರನ ವಾರಸುದಾರರು ಎನ್ನುತ್ತಾರೆ. ವಾದಿ ಸುಳ್ಳು ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ವಾದಿ ಶಿವಕುಮಾರನ ಮುಗ ಇಲ್ಲ ಎಂದು ಗೊತ್ತಿದ್ದರು ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ .**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ/-

ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು,

ಗುಬ್ಬಿ.